# ‘ನಾ ತಿತ್ತಿತ್ತಿರುಗುವ ತಿರುಗುಣಿಯಂತಾಂವಾ’

ನಾ ತಿತ್ತಿತ್ತಿರುಗುವ ತಿರುಗುಣಿಯಂತಾಂವಾ
ನಾ ನಿಲ್ಲಂಗಿಲ್ಲದ ನೀರಿನಂತಾಂವಾ
ನಾನೂರುಪಾರು ಹೊಕ್ಕುಹೊರಡಂವಾ
ನಾ ಕುರುಡು ಕಣ್ಣಾಗೆ ನಾಳೆಯಕಾಣಾಂವಾ
ನಾ ತಿತ್ತಿತ್ತಿರುಗುವ ತಿರುಗುಣಿಯಂತಾಂವಾ

ನಾ ಬಾನಿನುದ್ದಕೂ ತೇತೇಲಿ ಸಾಗಾಂವಾ
ನಾ ಗುಂಡುಬಂಡೆಗಳ ಮೆಟ್ಟಿ ನಿಲ್ಲಂವಾ
ನಾ ಚಂಡಮಾರುತಕ ಸೆಡ್ಡು ಹೊಡೆಯಂವಾ
ನಾ ಕುತ್ತಿನಂಗಳ್ದಾಗ ದಿಂಗಣ ಮಾಡಾಂವಾ
ನಾ ತಿತ್ತಿತ್ತಿರುಗುವ ತಿರುಗುಣಿಯಂತಾಂವಾ

ನಾ ಬುಡವೇ ಇಲ್ಲದ ಮೋಡದಂತಂವಾ
ನಾ ಕೊನೆಯೇ ಇಲ್ಲದ ದಾರಿಯಂತಂವಾ
ನಾ ಮುಚ್ಚೇ ಇಲ್ಲದ ಬಾಗಿಲಿನಂತಂವಾ
ನಾ ಮುಟ್ಟಲೇ ಬಾರದ ಕೋಲಿನಂತಂವಾ
ನಾ ತಿತ್ತಿತ್ತಿರುಗುವ ತಿರುಗುಣಿಯಂತಾಂವಾ

● **ಕಮಲಾಕರ ಕಡವೆ**
ಕಲೆ: ವಾಗೀಶ ಹೆಗಡೆ

